ತಮಗೆ ಗೊತ್ತಿದೆ ನಾನು ಯಾವ ಸಂಘಕ್ಕೆ ಸೇರಿದವನೆಂದು. ನಾನು ಹರಿಸುಕಾರ್ಡ್ ಬಳಕೆದಾರರ ಸಂಘಕ್ಕೆ ಸೇರಿದವನು ನನ್ನ ಅಭಿಪ್ರಾಯ ಕೇಳದೆ ಈ ಕೆಲಸ ನಡೆಯುತ್ತಿದೆ. ಇವರ ಹಸಿರು ಕಾರ್ಡಿಗೆ ಬಣ್ಣ ಹಚ್ಚಿದಾಗ ನನಗೆ ಅಸಮಾಧಾನವಾಗಿತ್ತು ಅದನ್ನು ರಾಜಕಾರಣದ ಕಾರಣದಿಂದ ಮಾಡಿದ್ದರು. ಹಸಿರು ಬಣ್ಣ ಹೆದರಿಸುವುದಕ್ಕೋಸ್ಕರ ಅದೇ ರೀತಿ ಅವರೇನು ಬಣ್ಣ ಹಾಕುವುದಕ್ಕೆ ಹೊರಟಿದ್ದಾರೆ ಅದಕ್ಕೂ ಕೆಟ್ಟ ಅರ್ಥ ಕಲ್ಪಿಸಬಾರದು ಜನ. ಈಗ ತಾನೇ ಮಂತ್ರಿಗಳು ತ್ರಿವರ್ಣಧ್ವಜಕ್ಕೆ ಗೌರವ ಕೊಟ್ಟು ನಾವು ಅದನ್ನು ಬಳಸುತ್ತಿದ್ದೇವೆಂದು ಹೇಳಿದರು. ಆದರೆ ನಿನ್ನೆ ಮೇಲ್ಮನೆಯಲ್ಲಿ ಈ ಕಾರ್ಯಕ್ರಮವನ್ನು ಪ್ರಕಟಣೆ ಮಾಡಿದ್ದಾರೆ. ಇದನ್ನು ಹರಿದು ಹಾಕುವುದಕ್ಕೆ ಅವಕಾಶ ಮಾಡಿಕೊಡಬಾರದು. ಹಸಿರುಕಾರ್ಡ್ ಬಳಕೆದಾರರ ಅಭಿಪ್ರಾಯವನ್ನು ನಾನು ಹೇಳುತ್ತೇನೆ. ದಯವಿಟ್ಟು ಎರಡು ಬಣ್ಣ ತೆಗೆದರೆ ಯಾವುದಾದರೂ ಮೂರನೆಯ ಬಣ್ಣ ನಾನ್ ಕಾಂಟ್ರಾವರ್ಸಿಯಲ್ ಕಲರ್ ಉಪಯೋಗಿಸಿ ಈ ಗೊಂದಲಕ್ಕೆ ಮುಕ್ತಾಯ ಹಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಈ ಕಾರ್ಡನ್ನು ವಿತರಣೆ ಮಾಡಬೇಕಾದರೆ ಪ್ರಾಮಾಣಿಕವಾಗಿ ವಿತರಣೆಯಾಗಬೇಕು. ಇಲ್ಲಿ ಪ್ರಶ್ನೆ ಏನೆಂದರೆ, ಫೋಟೋ ಹಾಕಬೇಕಾದರೆ ಡಾ. ಅಂಬೇಡ್ಕರ್ ಫೋಟೋ ಮತ್ತು ಗಾಂಧಿಜಿಯವರ ಫೋಟೋ ಹಾಕಿ. ಆದರೆ ಇಂದಿರಾಗಾಂಧಿಯವರನ್ನು ಯಾರನ್ನು ಜನ ಮರೆತಿದ್ದಾರೆ ಈ ಕಾರ್ಡಿನಲ್ಲಿ ಅವರ ಫೋಟೋ ಹಾಕಿ ಜ್ಞಾಪಕ ಮಾಡಿಕೊಳ್ಳುವ ಪ್ರಯತ್ನ ಸರಿಯಲ್ಲ.

ಅಧ್ಯಕ್ಷರು : ಅದು ನಿಮ್ಮ ಅಭಿಪ್ರಾಯ ಆಯಿತು. ಅದು ಪ್ರಶ್ನೆಯಾಗಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಫೋಟೋವನ್ನು ಹಾಕಿ ಸಂಪೂರ್ಣ ರಾಜಕೀಯ ದುರುಪಯೋಗ ಮಾಡಿಕೊಳ್ಳುವ ನೀತಿ ಏನಿದೆ, ಇದನ್ನು ನಾವು ಪ್ರತಿಭಟನೆ ಮಾಡಿ ಭಾರತೀಯ ಜನತಾ ಪಕ್ಷದ ವಾಕ್‌ಔಟ್ ಮಾಡುತ್ತೇವೆ. ಸಭೆಯಿಂದ ಹೊರಗೆ ಹೋಗುತ್ತೇವೆ ಸ್ವಾಮಿ. ಏಕಸ್ಮಾತ್ ಇದನ್ನು ಮಂದ ಬುದ್ಧಿಯಿಂದ ಮುಂದುವರಿಸಿದರೆ ರಾಜ್ಯದ್ಯಂತ ಹೋರಾಟ ಮಾಡುವ ಪ್ರಸಂಗ ಬರುತ್ತಿದೆನ್ನುವ ಎಚ್ಚರಿಕೆಯನ್ನು ಸರ್ಕಾರಕ್ಕೆ ಕೊಡುವುದಕ್ಕೆ ಇಚ್ಛಿಪಡುತ್ತೇನೆ.

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರುಗಳಾದ ಮಾನ್ಯ ಬಿ.ಎಸ್. ಯಡಿಯೂರಪ್ಪ ಕೆ.ಎಸ್. ಈಶ್ವರಪ್ಪ ಮತ್ತು ರುಕ್ಮಯ್ಯ ಪೂಜಾರಿಯವರು ಸಭಾತ್ಯಾಗ ಮಾಡಿದರು.)

ಶ್ರೀ ಸಿ.ಬೈರೇಗೌಡ : ಮಾನ್ಯ ಅಧ್ಯಕ್ಷರೆ ಹಸಿರು ಕಾರ್ಡ್ ಪದ್ಧತಿಯನ್ನು ಜಾರಿಗೆ ತರುವ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಈ ಕಡೆ ಕುಳಿತುಕೊಂಡಿದ್ದರು. ಈ ಬಣ್ಣವನ್ನು ಉಪಯೋಗಿಸಬಾರದೆಂದು ತೀರ್ಮಾನವಾಗಿತ್ತು. ಅದನ್ನು ವಿರೋಧ ಮಾಡಿದ ಕಾರಣದಿಂದ ವಾಪಸ್ಸು ತೆಗೆದುಕೊಂಡಿದ್ದಾರೆ. ಇವತ್ತಿನ ದಿವಸ ಕಾಂಗ್ರೆಸ್ ಪಕ್ಷದ ಬಾವುಟದ ಬಣ್ಣವನ್ನು ಜೊತೆಗೆ ಅವರ ಪಕ್ಷದ ನಾಯಕಿಯ ಭಾವಚಿತ್ರವನ್ನು ಹಸಿರು ಕಾರ್ಡಿನಲ್ಲಿ ಮುದ್ರಿಸಿ ಹಂಚತಕ್ಕ ಕಾಂಗ್ರೆಸ್ ಪಕ್ಷದ ನೀತಿ ಏನಿದೆ ಅದನ್ನು ನಾನು ಉಗ್ರವಾಗಿ ಪ್ರತಿಭಟಿಸಿ ಸಭೆಯಿಂದ ಹೊರಗಡೆ ಹೋಗುತ್ತೇನೆ.

(ಈ ಹಂತದಲ್ಲಿ ಸಮಾಜವಾದಿ ಜನತಾದಳದ ಸದಸ್ಯರಾದ ಶ್ರೀ ಸಿ. ಬೈರೇಗೌಡರು ಸಭಾತ್ಯಾಗ ಮಾಡಿದರು)